# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷಿ ಭಾಗ್ಯ ಯೋಜನೆಯಡಿ ಹೊಸ ತಾಲ್ಲೂಕುಗಳನ್ನು ಸೇರ್ಪಡೆ ಮಾಡಲು ಮಂಜೂರಾತಿ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂ:ಕೃಇ 08 ಕೃಯೋಕಾ 2014, ದಿ: 22-07-2014.
2. ಸೇರ್ಪಡೆ ಸಂ: ಕೃಇ 08 ಕೃಯೋಕಾ 2014, ದಿ: 12-01-2015.
3. ಕೃಷಿ ಆಯುಕ್ತರ ಪ್ರಸ್ತಾವನೆ ಸಂ:DDA/ISOPOM/KRISHIBHAGYA/WD 2014-15, ದಿನಾಂಕ:18-11-2014.

ಪ್ರಸ್ತಾವನೆ :

ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶಗಳಲ್ಲಿ 2014-15 ನೇ ಸಾಲಿನಲ್ಲಿ ರಾಜ್ಯದಲ್ಲಿ ಮಳೆಯಾಶ್ರಿತ ಕೃಷಿ ನೀತಿಯನ್ನು ಒಣ ವಲಯದಲ್ಲಿ 23 ಜಿಲ್ಲೆಗಳ 107 ತಾಲ್ಲೂಕುಗಳಲ್ಲಿ ಅಳವಡಿಸುವ ಕೃಷಿಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

ಮೇಲೆ ಓದಲಾದ (3) ರಲ್ಲಿನ ಪತ್ರದಲ್ಲಿ, ಕಡಿಮೆ ಮಳೆ ಬೀಳುವ ಆದರೆ ಒಣಪ್ರದೇಶಕ್ಕೆ ಒಳಪಡದ ತಾಲ್ಲೂಕುಗಳನ್ನು ಗುರುತಿಸಿ ಅಂತಹ ತಾಲ್ಲೂಕುಗಳ ಕಳೆದ 25 ವರ್ಷಗಳ ಸರಾಸರಿ ಮಳೆ ಮಾಹಿತಿ ಪಡೆದು, ಸರಾಸರಿ 850 ಮಿ.ಮೀ.ಗಿಂತ ಕಡಿಮೆ ಮಳೆ ಇರುವ ಒಟ್ಟು 22 ತಾಲ್ಲೂಕುಗಳನ್ನು ಕೃಷಿ ಭಾಗ್ಯ ಯೋಜನೆಯಡಿ ಸೇರ್ಪಡೆ ಮಾಡಲು ಮಂಜೂರಾತಿ ನೀಡಿ ಆದೇಶ ಹೊರಡಿಸುವಂತೆ ಕೃಷಿ ಆಯುಕ್ತರು ಕೋರಿರುತ್ತಾರೆ.

ಕೃಷಿ ಆಯುಕ್ತರು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ:ಕೃಇ/08/ಕೃಯೋಕಾ/2014, ಬೆಂಗಳೂರು,**
**ದಿನಾಂಕ: 25-02-2015.**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಈಗಾಗಲೇ ಕೃಷಿ ಭಾಗ್ಯ ಯೋಜನೆಯನ್ನು 107 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಕಡಿಮೆ ಮಳೆ ಬೀಳುವ ಆದರೆ ಒಣಪ್ರದೇಶಕ್ಕೆ ಒಳಪಡದ ಈ ಕೆಳಕಂಡ 22 ತಾಲ್ಲೂಕುಗಳನ್ನು ಸಹ ಕೃಷಿ ಭಾಗ್ಯ ಯೋಜನೆಯಡಿ ಸೇರ್ಪಡೆ ಮಾಡಿ ಆದೇಶಿಸಿದೆ.

| ಕ್ರ. ಸಂ. | ಜಿಲ್ಲೆ | ತಾಲ್ಲೂಕು |
|---|---|---|
| 1 | ಬೆಳಗಾವಿ | 1. ಬೈಲಹೊಂಗಲ, 2. ಚಿಕ್ಕೋಡಿ, 3. ಹುಕ್ಕೇರಿ |
| 2 | ಬೀದರ್ (ಹೊಸ ಸೇರ್ಪಡೆ) | 1. ಬಸವ ಕಲ್ಯಾಣ, 2. ಹುಮನಾಬಾದ್ |
| 3. | ದಾವಣಗೆರೆ | 1. ಚನ್ನಗಿರಿ, 2. ಹೊನ್ನಾಳಿ |
| 4. | ಧಾರವಾಡ | 1. ಧಾರವಾಡ, 2. ಹುಬ್ಬಳ್ಳಿ, 3. ಕುಂದಗೋಳ |
| 5. | ಗದಗ | 1. ಶಿರಹಟ್ಟಿ |
| 6 | ಕಲಬುರಗಿ | 1. ಆಳಂದ, 2. ಚಿಂಚೋಳಿ |
| 7. | ಹಾಸನ | 1. ಹೊಳೆನರಸೀಪುರ, |
| 8. | ಹಾವೇರಿ (ಹೊಸ ಸೇರ್ಪಡೆ) | 1. ಹಾವೇರಿ 2.ಹಿರೇಕೆರೂರು, 3.ರಾಣೆಬೆನ್ನೂರು, 4. ಸವಣೂರು, 5. ಬ್ಯಾಡಗಿ, 6. ಶಿಗ್ಗಾಂವ |
| 9. | ಮೈಸೂರು | 1. ಹೆಚ್.ಡಿ. ಕೋಟೆ, 2. ಹುಣಸೂರು |
| | ಒಟ್ಟು ತಾಲ್ಲೂಕುಗಳು – 22 | |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜ್ಯೋತಿ.ಆರ್.ಜೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).
25/2

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.

2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
4. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತಕಾರ್ಯದರ್ಶಿ, ವಿಧಾನಸೌಧ.
5. ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ.
6. ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ.
7. ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
8. ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ.
9. ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
10. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
11. ಆಯುಕ್ತರು/ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
12. ಆಯುಕ್ತರು/ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು.
13. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು.
14. ಸಚಿವ ಸಂಪುಟ ಶಾಖೆ- ಕಾರ್ಯಸೂಚಿ ಸಂಖ್ಯೆ:3, ದಿ: 25-06-2014(ಸಿ334/2014).
15. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
16. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-4), ಬೆಂಗಳೂರು.
17. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
18. ಸರ್ಕಾರದ ಉಪ ಕಾರ್ಯದರ್ಶಿ-1 ಮತ್ತು 2 ರವರ ಆಪ್ತ ಸಹಾಯಕರು, ಕೃಷಿ ಇಲಾಖೆ.
19. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

s